Phone: 91- 080-23330984
080-23330149

Website :www.uasbangalore.edu.in
Email : registrar@uasbangalore.edu.in

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಕುಲಸಚಿವರ ಕಛೇರಿ, ನಾಯಕ್ ಭವನ, ಗಾಕೃವಿಕೆ, ಬೆಂಗಳೂರು
UNIVERSITY OF AGRICULTURAL SCIENCES, BANGALORE
Office of the Registrar, Naik Bhavan, GKVK, Bengaluru-560 065

ಕ್ರ.ಸಂ: ಕು.ಸ./ಸಕುಸ/ಎಸ್‌ಎಫ್‌ಎ/ಡಿಪ್ಲೊಮಾ(ಕೃಷಿ) ಪ್ರವೇಶ2024-25

ದಿನಾಂಕ: 12.08.2024

# ಪರಿಷ್ಕೃತ ಅಧಿಸೂಚನೆ

ವಿಷಯ: ಡಿಪ್ಲೊಮಾ (ಕೃಷಿ) ಕೋರ್ಸ್‌ಗೆ (ಎರಡು ವರ್ಷ) 2024-25ನೇ ಶೈಕ್ಷಣಿಕ ವರ್ಷಕ್ಕೆ ಅರ್ಜಿಯನ್ನು ಆಹ್ವಾನಿಸಿರುವುದರ-ಬಗ್ಗೆ.

ಉಲ್ಲೇಖ:1. ಈ ಕಛೇರಿಯ ಅಧಿಸೂಚನೆ ಸಂಖ್ಯೆ:ಕು.ಸ./ಸಕುಸ/ಎಸ್‌ಎಫ್‌ಎ/ಡಿಪ್ಲೊಮಾ(ಕೃಷಿ) ಪ್ರವೇಶ/2024-25 ದಿನಾಂಕ: 15.07.2024

2. ಶಿಕ್ಷಣ ನಿರ್ದೇಶಕರು, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು ಇವರ ಶಿಫಾರಸ್ಸಿನ ದಿನಾಂಕ: 12.08.2024
3. ಕುಲಪತಿಗಳು ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು ಇವರ ಅನುಮೋದನೆಯ ದಿನಾಂಕ: 12.08.2024

***

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಅಧೀನದಲ್ಲಿರುವ ಕೃಷಿ ಮಹಾವಿದ್ಯಾಲಯ, ವಿ.ಸಿ. ಫಾರಂ, ಮಂಡ್ಯ, ದಲ್ಲಿ **2024-25**ನೇ ಶೈಕ್ಷಣಿಕ ವರ್ಷದಲ್ಲಿ ಎರಡು ವರ್ಷಗಳ ಡಿಪ್ಲೊಮಾ (ಕೃಷಿ) ಕೋರ್ಸ್‌ಗೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸುವ ಅವಧಿಯನ್ನು **ದಿನಾಂಕ:15.07.2024 ರಿಂದ 10.08.2024**ರ ವರೆಗೆ ನೀಡಲಾಗಿತ್ತು. ಮುಂದುವರೆದು, ಎರಡು ವರ್ಷಗಳ ಡಿಪ್ಲೊಮಾ (ಕೃಷಿ) ಕೋರ್ಸ್‌ಗೆ ಅರ್ಜಿ ಸಲ್ಲಿಸುವ ಅವಧಿಯನ್ನು **ದಿನಾಂಕ:12.08.2024 ರಿಂದ 21.08.2024** ರವರೆಗೆ ವಿಸ್ತರಿಸಲಾಗಿದೆ.

ಅರ್ಜಿ ಹಾಗೂ ಮಾಹಿತಿ ಪುಸ್ತಕವನ್ನು ಕೃಷಿ ವಿಶ್ವವಿದ್ಯಾನಿಲಯ ಜಿ.ಕೆ.ವಿ.ಕೆ., ಬೆಂಗಳೂರು-560065, ವೆಬ್‌ಸೈಟ್ www.uasbangalore.edu.in ನಲ್ಲಿ ಡೌನ್‌ಲೋಡ್ ಮಾಡಬಹುದು. ಈ ರೀತಿ ವೆಬ್‌ಸೈಟ್ ಮುಖಾಂತರ ಪಡೆದು ಭರ್ತಿಮಾಡಿದ ಅರ್ಜಿಗಳನ್ನು, ಅರ್ಜಿಯ ನಿಗದಿತ ಶುಲ್ಕವನ್ನು ಡಿ.ಡಿ. ರೂಪದಲ್ಲಿ ಲಗತ್ತಿಸಿ, **ದಿನಾಂಕ.21.08.2024** ರೊಳಗೆ ಕಳುಹಿಸಿಕೊಡಬೇಕು. **ದಿನಾಂಕ.21.08.2024**ರ ನಂತರ ಡಿ.ಡಿ. ಯನ್ನು ಪಡೆದು ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ಅರ್ಜಿ ಶುಲ್ಕ:**

ಸಾಮಾನ್ಯ ವರ್ಗದವರಿಗೆ **ರೂ.500/-**, ಪ.ಜಾ./ಪ.ಪಂ./ಪ್ರವರ್ಗ-I ರವರಿಗೆ ರೂ.250/-ಆಗಿದ್ದು, ರಾಷ್ಟ್ರೀಕೃತ ಬ್ಯಾಂಕ್‌ಗಳ (Nationalised Bank) ಮೂಲಕ ಡಿ.ಡಿ.ಯನ್ನು **Comptroller, UAS, GKVK, Bangalore-560065** ಇವರ ಹೆಸರಿನಲ್ಲಿ ಪಡೆದು ಎಲ್ಲಾ ಅಗತ್ಯ ಅಡಕಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಕುಲಸಚಿವರು, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ., ಬೆಂಗಳೂರು-560065 ಇಲ್ಲಿಗೆ ದಿನಾಂಕ.21.08.2024ರ (ಸಂಜೆ 4.00 ಗಂಟೆ) ಒಳಗೆ ತಲುಪುವಂತೆ ಖುದ್ದಾಗಿ ಅಥವಾ ಅಂಚೆ ಮೂಲಕ ಕಳುಹಿಸಬಹುದು.

ಆದೇಶದ ಮೇರೆಗೆ

12/08

ಕುಲಸಚಿವರು

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

**ಗಾಂಧಿ ಕೃಷಿ ವಿಜ್ಞಾನ ಕೇಂದ್ರ - 560 065, ಕರ್ನಾಟಕ, ಭಾರತ**

**ಡಿಪ್ಲೊಮಾ (ಕೃಷಿ), ಕೃಷಿ ಮಹಾವಿದ್ಯಾಲಯ, ವಿ.ಸಿ. ಫಾರಂ, ಮಂಡ್ಯ**

**ಡಿಪ್ಲೊಮಾ (ಕೃಷಿ) ಎರಡು ವರ್ಷದ ಕೋರ್ಸ್**

**2024–25ನೇ ಸಾಲಿನ ಪ್ರವೇಶಾತಿಯ ತಾತ್ಕಾಲಿಕ ಪರಿಷ್ಕೃತ ವೇಳಾಪಟ್ಟಿ**

| ಕ್ರ. ಸಂ. | ವಿವರಗಳು | ದಿನಾಂಕ | ದಿನ |
|---|---|---|---|
| 01 | ಅರ್ಜಿ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ | 15.07.2024 | ಸೋಮವಾರ |
| 02 | ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ **(ಭರ್ತಿ ಮಾಡಿದ ಅರ್ಜಿಗಳನ್ನು ಅಂಚೆ ಮೂಲಕ ಅಥವಾ ಖುದ್ದಾಗಿ ಈ ವಿಳಾಸಕ್ಕೆ ಸಲ್ಲಿಸುವುದು. "ಕುಲಸಚಿವರು", ಕೃಷಿ ವಿಶ್ವವಿದ್ಯಾನಿಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–560 065)** | 21.08.2024 | ಬುಧವಾರ |
| 03 | ಭರ್ತಿ ಮಾಡಿದ ಅರ್ಜಿಗಳ ಪರಿಶೀಲನೆ | 26.08.2024<br>27.08.2024 | ಸೋಮವಾರ<br>ಮಂಗಳವಾರ |
| 04 | ವಿಶೇಷ ವರ್ಗಗಳ ಅಭ್ಯರ್ಥಿಗಳ ಮೂಲ ಪ್ರತಿಗಳನ್ನು **ಡೀನ್ (ವಿದ್ಯಾರ್ಥಿ ಕಲ್ಯಾಣ), ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–560 065 ರವರ ಕಛೇರಿಯಲ್ಲಿ ಪರಿಶೀಲನೆ ಮಾಡಲಾಗುವುದು**<br>(ಎ) ಕ್ರೀಡೆ<br>(ಬಿ) ಯೋಧರು / ಮಾಜಿ ಯೋಧರು/ ಆಂಗ್ಲೋ–ಇಂಡಿಯನ್<br>(ಸಿ) ವಿಶೇಷ ಚೇತನರು | 30.08.2024 | ಶುಕ್ರವಾರ |
| 05 | ಅರ್ಹತಾ ಪಟ್ಟಿ ಪ್ರಕಟಣೆ | 05.09.2024 | ಗುರುವಾರ |
| 06 | ಆಯ್ಕೆಯಾದ ಅಭ್ಯರ್ಥಿಗಳ ಮೊದಲನೇ ಪಟ್ಟಿ ಪ್ರಕಟಣೆ | 10.09.2024 | ಮಂಗಳವಾರ |
| 07 | ಮೊದಲನೇ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಕಾಲೇಜಿಗೆ ಸೇರಲು ಕೊನೆಯ ದಿನಾಂಕ | 20.09.2024 | ಶುಕ್ರವಾರ |
| 08 | 2ನೇ ಪಟ್ಟಿ ಪ್ರಕಟಣೆ | 23.09.2024 | ಸೋಮವಾರ |
| 09 | 2ನೇ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಕಾಲೇಜಿಗೆ ಸೇರಲು ಕೊನೆಯ ದಿನಾಂಕ | 25.09.2024 | ಬುಧವಾರ |
| 10 | **2024–25**ರ ಮೊದಲನೇ ಸೆಮಿಸ್ಟರ್ ಪ್ರಾರಂಭದ ದಿನಾಂಕ | 30.09.2024 | ಸೋಮವಾರ |

**ಅರ್ಜಿ ಶುಲ್ಕ ಸಾಮಾನ್ಯ ವರ್ಗ: ರೂ.500/-  ಪ.ಜಾ./ಪ.ಪ./ಪ್ರವರ್ಗ–I ರೂ.250/-**

**ಸೂಚನೆ:**

1. ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಕೊನೆಯ ದಿನಾಂಕ:**21.08.2024** ಹಾಗೂ ಭರ್ತಿ ಮಾಡಿದ ಅರ್ಜಿಗಳನ್ನು ಮತ್ತು ಅರ್ಜಿಯ ಶುಲ್ಕವನ್ನು ಡಿ.ಡಿ ರೂಪದಲ್ಲಿ ಲಗತ್ತಿಸಿ **ಕುಲಸಚಿವರು, ಕುಲಸಚಿವರ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು 560 065,** ಇಲ್ಲಿಗೆ ಅಂಚೆ ಮೂಲಕ ಅಥವಾ ಖುದ್ದಾಗಿ ತಲುಪಿಸಲು ಕೊನೆಯ ದಿನಾಂಕ:**21.08.2024**
2. ಅರ್ಜಿ ನಮೂನೆ ಶುಲ್ಕವನ್ನು **Comptroller, UAS, GKVK, Bengaluru** ಇವರ ಹೆಸರಿಗೆ ಪಾವತಿಯಾಗುವಂತೆ ಡಿ.ಡಿ. ಮೂಲಕ ಮಾತ್ರ ಪಾವತಿಸಬೇಕು.
3. ಅರ್ಜಿಯ ಜೊತೆಗೆ ನೀಡಲಾಗಿರುವ ವಿವರಣಾ ಪುಸ್ತಕವನ್ನು ಡೌನ್‌ಲೋಡ್ ಮಾಡಿಕೊಳ್ಳುವುದು, ಅಭ್ಯರ್ಥಿಯು ವಿವರಣಾ ಪುಸ್ತಕವನ್ನು ಡೌನ್‌ಲೋಡ್ ಮಾಡಿಕೊಂಡು ಅದನ್ನು ವಿವರವಾಗಿ ಓದಿದ ನಂತರ ಅರ್ಜಿಯನ್ನು ವಿವರಣ ಪುಸ್ತಕದಲ್ಲಿ ಸೂಚಿಸಿದಂತೆ ಭರ್ತಿ ಮಾಡಿದ ಅರ್ಜಿಯನ್ನು ಮಾತ್ರ ಸಲ್ಲಿಸಬೇಕು.